ಉತ್ತರಾದಿ ಶೈಲಿ ತಿಳಿಯಲು ಪರ್ವಿನ್ ಸುಲ್ತಾನ, ಕೌಶಿಕಿ ಚಕ್ರವರ್ತಿ ಮೊದಲಾದವರ ಸಂಗೀತ ತುಂಬ ಕೇಳ್ತಿದ್ರು. ಪ್ರಯೋಗಶೀಲ ಗುಣದಿಂದಾಗಿಯೇ ಕದ್ರಿ ಸ್ಯಾಕ್ಸೊಫೋನ್‌ನಲ್ಲಿ ಮೇರುಶಿಖರವಾಗಿರೋದು.

ದೇವರ ಬಗ್ಗೆ ಅಪಾರ ಒಲವು. ಪೂಜೆ ಪುನಸ್ಕಾರ ದಿನಾ ಮಾಡ್ತಿದ್ರು. ತಾಯಿ ಭುವನೇಶ್ವರಿಯನ್ನು ಬಹುವಾಗಿ ನಂಬಿದ್ರು. ಪ್ರತೀವರ್ಷ ಚೆನ್ನೈಯಲ್ಲಿ ಜನವರಿ ಒಂದರಂದು ದೇವಿ ದೇವಾಲಯದಲ್ಲಿ ಸಂಗೀತ ಸೇವೆ ತಪ್ಪದೇ ಮಾಡ್ತಿದ್ರು. ಸಂಗೀತ ಅಲ್ಲದೆ ಟೀವಿ, ಸಿನಿಮಾ ನೋಡುವ ಹುಚ್ಚು ಬಹಳ ಇತ್ತು. ವನ್ಯಜೀವಿಗಳ ಬಗ್ಗೆ ಅಪಾರ ಒಲವು.

## ವೇದಿಕೆಯಲ್ಲಿ ಸ್ವರಮಾಲೆ; ಹೋಟೆಲ್‌ನಲ್ಲಿ ಮಣಿಮಾಲೆ

ಕದ್ರಿ ಅವರಲ್ಲಿ ಸೌಂದರ್ಯಪ್ರಜ್ಞೆ ಸದಾ ಜಾಗೃತವಾಗಿರುತ್ತಿತ್ತು. ಅವರು ಧರಿಸುತ್ತಿದ್ದ ಮಣಿಹಾರಗಳನ್ನು ತಾವೇ ಪೋಣಿಸುತ್ತಿದ್ದರು. ವಿದೇಶಗಳಿಗೆ ಹೋದಾಗ ಮಾರುಕಟ್ಟೆಗೆ ಹೋಗಿ ಬಣ್ಣಬಣ್ಣದ ಮಣಿಗಳನ್ನು ತರುತ್ತಿದ್ದರು. ಹೋಟೆಲ್ ರೂಮ್‌ನಲ್ಲಿ ಕುಳಿತು ಹಾಡು ಕೇಳುತ್ತಾ ತಮಗೆ ಬೇಕಾದ ಹಾಗೆ ಮಣಿಮಾಲೆ ತಯಾರಿಸಿ ಅದನ್ನೇ ಕಛೇರಿಗಳಿಗೆ ಹೋಗುವಾಗ ಧರಿಸುತ್ತಿದ್ದರು. ವೇದಿಕೆಯಲ್ಲಿ ವಾದ್ಯದಲ್ಲಿ ಸ್ವರಮಾಲೆ ಪೋಣಿಸಿದರೆ ಮನೆ ಅಥವಾ ಹೋಟೆಲ್ ರೂಮ್‌ಗಳಲ್ಲಿ ಮಣಿಮಾಲೆ ತಯಾರಾಗುತ್ತಿತ್ತು.

ಶಾಪಿಂಗ್ ಮಾಡೋದು, ವಾದ್ಯಗಳನ್ನು ಖರೀದಿಸೋದು ಅವರಿಗೆ ಬಹಳ ಇಷ್ಟ. ಸ್ಯಾಕ್ಸೊಫೋನ್‌ಗಾಗಿ ಎಷ್ಟು ಹಣ ಬೇಕಾದರೂ ಖರ್ಚು ಮಾಡ್ತಿದ್ರು. 6.5 ಲಕ್ಷ ರೂಪಾಯಿ ಬೆಲೆಯ ಸ್ಯಾಕ್ಸೊಫೋನ್ ಖರೀದಿಸಿ ಅದೇ ವಾದ್ಯದಲ್ಲಿ ಅನೇಕ ಪ್ರಯೋಗಗಳನ್ನೂ ಮಾಡಿದ್ರು. ಸಂಗೀತವನ್ನು ತಪಸ್ಸಿನಂತೆ ಧ್ಯಾನಿಸಿದ ಮೇರು ಕಲಾವಿದ ಕದ್ರಿ ಗೋಪಾಲನಾಥ್ ಎಂಬುದು ನಿಸ್ಸಂಶಯ.

## ವಾದನ ಧ್ಯಾನಿಗನ ರುಚಿಗುಣ

ಕದ್ರಿ ಅವರೊಂದಿಗೆ ಸುಮಾರು ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಮೋರ್ಚಿಂಗ್ ನುಡಿಸಿದ ಕಲಾವಿದ ವಿದ್ವಾನ್ ರಾಜಶೇಖರ ಭೀಮಾಚಾರ್ ಅವರಿಗೆ ಕದ್ರಿ ಅವರೊಂದಿಗೆ ಕಛೇರಿಗಳಲ್ಲಿ ನುಡಿಸಿದ್ದೇ ಹೆಮ್ಮೆ ಎನ್ನುತ್ತಾರೆ.

‘ಜನರ ನಾಡಿಮಿಡಿತ ಅರಿಯುವ, ಅಭಿರುಚಿಗೆ ತಕ್ಕಂತಹ ಸಂಗೀತವನ್ನೇ ಕೊಡುವ ವಿಶಿಷ್ಟ ಗುಣ ಕದ್ರಿ ಅವರದ್ದು. ಜತೆಗೆ ಸಂಗೀತ ಶಿಸ್ತು, ಸಮಯ ಪರಿಪಾಲನೆ ಅವರಿಂದಲೇ ಕಲಿಯಬೇಕು. ಕಳೆದ ಮೂವತ್ತು ವರ್ಷಗಳಿಂದ ಕದ್ರಿ ಅವರ ನೂರಾರು ಕಛೇರಿಗಳಲ್ಲಿ ದೇಶ ವಿದೇಶಗಳಲ್ಲೂ ಮೋರ್ಚಿಂಗ್ ನುಡಿಸಿದ ಹೆಮ್ಮೆ ನನಗಿದೆ’ ಎನ್ನುತ್ತಾರೆ.

ಕರ್ನಾಟಕ ಸಂಗೀತದಲ್ಲಿ ಗಮಕಗಳಿಗೆ ಬಹಳ ಪ್ರಾಧಾನ್ಯತೆ. ಬೇರೆ ವಾದ್ಯಗಳಂತೆ ಸ್ಯಾಕ್ಸೊಫೋನ್‌ನಲ್ಲಿ ಗಮಕಗಳನ್ನು ತರುವುದು ಕಷ್ಟ. ಇದನ್ನು ಸವಾಲಾಗಿ ಸ್ವೀಕರಿಸಿ ಗಮಕಗಳನ್ನು ಕರಾರುವಕ್ಕಾಗಿ ನುಡಿಸುತ್ತಿದ್ದರು. ಜನರ ನಾಡಿಮಿಡಿತ ಅರಿತು ನುಡಿಸುತ್ತಿದ್ದುದು ಕದ್ರಿ ಅವರ ಹೆಚ್ಚುಗಾರಿಕೆ. ಸಂಗೀತದಲ್ಲಿ ಸಾಹಿತ್ಯ ಪ್ರಧಾನ. ವಾದ್ಯದಲ್ಲಿ ಜನಸಾಮಾನ್ಯರು ಸಾಕಷ್ಟು ಕೇಳಿರುವ ಕೃತಿಗಳಿಗೇ ಆದ್ಯತೆ ನೀಡುತ್ತಿದ್ದರು. ತ್ಯಾಗರಾಜರ ನಗುಮೋಮು ಗಲನೇನಿ ಕೃತಿ, ರಘುವಂಶ ಸುಧಾಂಬುಧೆ, ಆಡಿಸಿದಳೆ ಯಶೋದಾ ಮುಂತಾದ ಕೃತಿಗಳು ಸದಾ ಕಛೇರಿಯಲ್ಲಿರುತ್ತಿತ್ತು. ಎಲ್ಲರಿಗೂ ಅರ್ಥವಾಗಲಿ ಎಂಬುದು ಇದರ ಉದ್ದೇಶ. ಸಾಮಾನ್ಯವಾಗಿ ಎಲ್ಲ ಕಡೆ ಕೇಳುಗರು ತಮಗೆ ಇಷ್ಟವಾದ ಕೃತಿ ನುಡಿಸುವಂತೆ ಚೀಟಿ ಬರೆದು ಕಳಿಸುತ್ತಾರೆ. ಎಲ್ಲರನ್ನೂ ಸಮಾಧಾನಪಡಿಸಿ ಸಮಯದ ಅಭಾವ ಇದ್ದರೂ ಜನರಪ್ರೀತಿಗೆ ಮೋಸ ಮಾಡುತ್ತಿರಲಿಲ್ಲ.

ಒಂದು ಘಟನೆ ನೆನಪಾಗ್ತದೆ. ಅದು 1994ರ ಇಸವಿ. ಸರಿಸುಮಾರು 25 ವರ್ಷಗಳ ಹಿಂದೆ. ಕದ್ರಿ ಅವರೊಂದಿಗೆ ಮೋರ್ಚಿಂಗ್ ನುಡಿಸುವ ಸಲುವಾಗಿ ಲಂಡನ್‌ನ ರಾಯಲ್ ದರ್ಬಾರ್ ಹಾಲ್‌ಗೆ ಹೋಗಿದ್ದೆ. ಅಲ್ಲಿ 45 ನಿಮಿಷಗಳ ಕಛೇರಿ. ಕಾರ್ಯಕ್ರಮದಲ್ಲಿ ಏನು ನುಡಿಸುತ್ತಾರೆ ಎಂಬುದನ್ನು ಮೊದಲೇ ಸಂಘಟಕರಿಗೆ ತಿಳಿಸಬೇಕು. ಹಾಗೆ ಅವರು ಹಂಸಧ್ವನಿ ರಾಗದ ‘ವಾತಾಪಿ ಗಣಪತಿಂ ಭಜೆ’, ಕಲ್ಯಾಣ ವಸಂತ ರಾಗದ ‘ನಾದ ಲೋಲುಡೈ’ ಹಾಗೂ ಕೊನೆಗೆ ದಾಸರಪದ ‘ಭಾಗ್ಯದ ಲಕ್ಷ್ಮಿ ಬಾರಮ್ಮ’ ನುಡಿಸಿದರು. ಎಲ್ಲರಿಗೂ ಬಹಳ ರಂಜನೆ ಒದಗಿಸಿದರು. ಅದೇ ರಾಗ, ಅದೇ ಕೃತಿಗಳಾದರೂ ‘ಮನೋಧರ್ಮ ಸಂಗೀತ’ ಮಾತ್ರ ಬಹಳ ವಿಭಿನ್ನವಾಗಿರುವಂತೆ ನೋಡಿಕೊಳ್ಳುವುದು ಕದ್ರಿ ಅವರ ವೈಶಿಷ್ಟ್ಯ. ಪಕ್ಕವಾದ್ಯದವರನ್ನು ಅಷ್ಟೇ ಪ್ರೀತಿ, ಗೌರವದಿಂದ ಕಾಣುವ ಗುಣವೂ ಅವರ ಪ್ಲಸ್‌ಪಾಯಿಂಟ್.

### ಪ್ರಶಸ್ತಿ-ಪುರಸ್ಕಾರ

- ಕೇಂದ್ರ ಸರ್ಕಾರದಿಂದ ‘ಪದ್ಮಶ್ರೀ’
- ತಮಿಳುನಾಡು ಸರ್ಕಾರ ನೀಡುವ ‘ಕಲೈಮಾಮಣಿ’
- ರಾಜ್ಯ ಸಂಗೀತ, ನೃತ್ಯ ಅಕಾಡೆಮಿ ಪ್ರಶಸ್ತಿ
- ದೇಶದ ಹಲವು ಮಠ–ಪೀಠಗಳಿಂದ ‘ಆಸ್ಥಾನ ವಿದ್ವಾನ್’ ಬಿರುದು
- ‘ಸ್ಯಾಕ್ಸೋಫೋನ್ ಚಕ್ರವರ್ತಿ’ ಬಿರುದು
- ‘ಸ್ಯಾಕ್ಸೋಫೋನ್ ಸಾಮ್ರಾಟ’ ಬಿರುದು
- ರಾಜ್ಯೋತ್ಸವ ಪುರಸ್ಕಾರ
- ವಿವಿಧ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿ



ಅಬ್ದುಲ್ ಕಲಾಂ ಅವರಿಂದ ಪ್ರಶಸ್ತಿ ಪಡೆಯುತ್ತಿರುವ ಕದ್ರಿ ಗೋಪಾಲನಾಥ್



ಕದ್ರಿ ಅವರೊಂದಿಗೆ ರಾಜಶೇಖರ್ ಭೀಮಾಚಾರ್